ಮನಸ್ಸಿನಲ್ಲಿ ಅವ್ಯಕ್ತ ಅತೃಪ್ತಿ, ಅದೇನೋ ಬೇಚೈನಿ ಉಳಿದುಕೊಳ್ಳುವುದು ಇತ್ತೀಚೆಗೆ ಸುಮಿಯ ಗಮನಕ್ಕೆ ಬರತೊಡಗಿತ್ತು. ಸೂರ್ಯಾಸ್ತದಂಥ ಅಮೋಘ ದೃಶ್ಯದಿಂದ ಹೃದಯ ತುಂಬಿ ಬಂದರೂ, ಮರಳುವಾಗ ಅವಳ ಕಣ್ಣುಗಳು ನಿಷ್ಕಾರಣವಾಗಿ ಆರ್ದ್ರಗೊಳ್ಳುತ್ತಿದ್ದವು. ಮನಸ್ಸಿನಲ್ಲಿಯ ಅಖಂಡ ಪ್ರಸನ್ನತೆ ಮನೆಗೆ ಬರುವಷ್ಟರಲ್ಲಿ ಚಿಕ್ಕ ಆರ್ತಸ್ವರೂಪ ತಾಳುತ್ತಿತ್ತು. ತನ್ನೊಳಗೆ ಕಡಲಿನ ದಾಹವಿದೆ ಎಂದು ತಿಳಿದವಳಿಗೆ, ಮನಸು ಕಡಲಿನಾಚೆಗೂ ಇನ್ನೇನೋ ಹುಡುಕುತಿದೆ ಅನಿಸುತ್ತಿತ್ತು. 'ಕಾಣದ ಕಡಲಿಗೆ ಹಂಬಲಿಸಿದೆ ಮನ…' ಎಂಬ ಕವಿಮಾತು ಕಾಣುವ ಕಡಲಿನೆದುರೇ ಅಲೆಅಲೆಯಾಗಿ ಮೊರೆಯುತ್ತಿತ್ತು. ಯಾಕೆ ಯಾಕೆ ಯಾಕೆ ಎಂದು ಕೇಳಿಕೊಳ್ಳುವಳು. ಕಡಲು ಉಕ್ಕಿಸುವ ಸಂಭ್ರಮವನ್ನು ತುಳುಕಾಡದಂತೆ ಹಿಡಿದುಕೊಳ್ಳುವುದು ನನಗೆ ಅಸಾಧ್ಯವಿರಬಹುದೇ? ತುಂಬಿದ ಸಂತೋಷವೂ ಮನಸಿಗೆ ಭಾರವೇ? ಹಂಚಿಕೊಂಡು ಹಗುರಾಗಲು ಬಯಸುತ್ತಿದೆಯೇ ಮನಸು? ತನ್ನೆದೆಯೊಳಗಿನ ಕಡಲ ಘೋಷವನ್ನು ಆಪ್ತ ಎದೆಯೊಂದಕ್ಕೆ ಕೇಳಿಸುವ ಹಂಬಲವೇ? ಇಳಿಸಂಜೆಯ ಬೀಚಲ್ಲಿ ಒತ್ತಿ ಕುಳಿತ ಜೀವಗಳು, ಕಾಳಿನದಿಯ ಸೇತುವೆಯಲ್ಲಿ ಕೈಕೈ ಬೆಸೆದು ನಿಂತ ಜೋಡಿಗಳು ತನ್ನ ಒಂಟಿ ಸಂಭ್ರಮವನ್ನು ಹಂಗಿಸಿದಂತೆ ಯಾಕೆ ಅನಿಸುತ್ತಿದೆ? ಖುಷಿಯು ಖೈದ್ ಆಗಲು ನಿರಾಕರಿಸಿ ಕಾಳಿಯಂತೆ ಪ್ರವಹಿಸುತ್ತಿರಲು ಬಯಸುತ್ತದೆಯೇ?

ತೆರೆಗಳಂತೆ ಏಳುವ ತುಮುಲಗಳನ್ನು ಕಾವ್ಯಾತ್ಮಕ ಗ್ರಹಿಕೆಗಳಲ್ಲಿ ಸೋಸಿ ಸಂಗ್ರಹಿಸಿ, ಸುಮಿ ಅದಕ್ಕೆ ಒಂದು ಸಾಲಿನ ಉತ್ತರವನ್ನು ಅಂತಿಮಗೊಳಿಸಿದಳು: 'ಹೃದಯವು ಒಂದು ಆತ್ಮೀಯ ಜೀವಕ್ಕಾಗಿ ತಡಪಿಸುತ್ತಿದೆ!'

ಸುಮಿಗೆ ಹುಡುಗರ ಬಗ್ಗೆ ಆಸಕ್ತಿ ಇದ್ದದ್ದು ಸುಳ್ಳಲ್ಲ. ಹುಡುಗರಂತೂ ಸುಮಿಯತ್ತ ತಿರುತಿರುಗಿ ನೋಡುತ್ತಿದ್ದರು. ಕಾಲೇಜಿನಲ್ಲಿ ಮಾಡ್ ಹುಡುಗಿಯರ ನಡುವೆಯೂ ಇವಳ ವಿಶಿಷ್ಟ ಸೌಂದರ್ಯ ಮತ್ತು ಆತ್ಮವಿಶ್ವಾಸ ಎಲ್ಲರ ಗಮನ ಸೆಳೆದದ್ದು ನಿಜ. ಅವಳದು ಬಯಲುಸೀಮೆಯ ಆಡು ಕನ್ನಡವಾದರೂ, ಸಂದರ್ಭ ಬಂದರೆ ಗ್ರಾಂಥಿಕ ಕನ್ನಡದಲ್ಲಿ ಮತ್ತು ಇಂಗ್ಲೀಷಿನಲ್ಲಿ ನಿರರ್ಗಳವಾಗಿ ಸಂಭಾಷಿಸುವ ಪ್ರತಿಭೆಯಿಂದಾಗಿ ಮೂರ್ನಾಲ್ಕು ತಿಂಗಳಲ್ಲಿ ಆಕೆಗೆ ಸಾಕಷ್ಟು ವಿದ್ಯಾರ್ಥಿಗಳ ಪರಿಚಯವೂ ಸ್ನೇಹವೂ ಸಿಕ್ಕಿತ್ತು. ಮನೆಯ ಅಕ್ಕಪಕ್ಕದಲ್ಲೂ ಕೆಲವರ ಸ್ನೇಹ ಸಂಪಾದಿಸಿದ್ದಳು. ಆದರೆ ಸ್ನೇಹವನ್ನೂ ಮೀರಿದ ಏನನ್ನೋ ಅವಳ ಮನಸ್ಸು ಹಂಬಲಿಸುತ್ತಿತ್ತು.

ಪಕ್ಕದ ಮನೆಯ ಅಂಕಲ್ಲು ಲೈನ್ ಹೊಡೆಯುತ್ತಿದ್ದ. ಬೈಕು ಒರೆಸುವ ನೆಪದಲ್ಲಿ ಗ್ಯಾರೇಜಿನಲ್ಲಿ ಹೆಚ್ಚು ಹೊತ್ತು ಇರುತ್ತಿದ್ದ. ಅಲ್ಲಿಂದ ತಮ್ಮ ಬಾಡಿಗೆ ಮನೆಯ ನೇರ ನೋಟ ಅವನಿಗೆ ಸಾಧ್ಯವಿತ್ತು. ಅವನ ಬೈಕು ಕಾರು ಇವಳನ್ನು ಆಕರ್ಷಿಸಿದರೂ, ಆತ ಸಾಕಷ್ಟು ಹ್ಯಾಂಡ್ಸಮ್ ಇದ್ದರೂ ಆತ ಖಂಡಿತ ಅವಳ ಕನಸಿನ ಹುಡುಗ ಆಗಿರಲಿಲ್ಲ. ಬೀಚ್ ಕಡೆ ಸುಂಯ್ಯನೆ ಸಾಗುವ ಪಡ್ಡೆ ಹುಡುಗರೂ ಇವಳತ್ತ ಸಿಳ್ಳೆ ಹೊಡೆಯುವುದು, ಏನಾದರೂ ಕಾಮೆಂಟ್ ಮಾಡುವುದು ನಡೀತಿತ್ತು. ನೀಳ ಕೂದಲು, ತುಸು ದಪ್ಪಗಿರುವ ಹುಬ್ಬು. ಬಾಗಿ ಬಳಕುವ ರೀತಿಗೆ ಅವು ದೀರ್ಘವಾಗಿ ಕಾಣುತ್ತಿದ್ದವು. ಆ ತುಂಬು ಹುಬ್ಬುಗಳ ಅಡಿಯಲ್ಲಿ ಮಿನುಗುವ ಕಣ್ಣುಗಳ ಚಲನೆಯಲ್ಲಿ ಅದೇನೋ ಆಕರ್ಷಣೆಯಿತ್ತು… ಇಂಥ ಸಾಂಪ್ರದಾಯಿಕ ಚೆಲುವಿನಿಂದಲೇ ಭಿನ್ನವಾಗಿ ತೋರುತ್ತಿದ್ದ ಸುಮಿ ನಗರಕ್ಕೆ ಬಂದ ಹೊಸ ಹಕ್ಕಿಯಂತೆ ಕಾಣುತ್ತಿದ್ದದ್ದು ಸುಳ್ಳಲ್ಲ. ಅವಳೂ ಹುಡುಗರ ಸ್ಪೈಕೀ, ಶ್ಯಾಗೀ ಇತ್ಯಾದಿ ಚಿತ್ರ ವಿಚಿತ್ರ ಹೇರ್ ಸ್ಟೈಲುಗಳನ್ನೂ, ರಿಪ್ಡ್ ಜೀನ್ಸು, ಜಾಕೆಟ್ಟುಗಳನ್ನೂ ವಯೋಸಹಜ ಕುತೂಹಲದಿಂದ ಗಮನಿಸುತ್ತಿದ್ದದ್ದು ನಿಜ. ಆದರೆ ಅಂಥ ಬಾಹ್ಯ ಅಲಂಕಾರಗಳಾಚೆ ಅವಳ ಹುಡುಕಾಟವಿತ್ತು. ಹುಡುಗರತ್ತ ಸಹಜ ಆಕರ್ಷಣೆಯಿತ್ತಾದರೂ, ಪಡ್ಡೆಗಳ ಬಲೆಗೆ ಬೀಳುವಷ್ಟು ಎಳಸಾಗಿರಲಿಲ್ಲ. ಅಂಥವರ ಯಾವುದೇ ವರಸೆಗೂ ಪಕ್ಕಿ ಬೀಳುವ ಪೈಕಿಯಾಗಿರಲಿಲ್ಲ. ಸುಮಿ ಕಾಲೇಜಿಗೆ ಹೋಗುವಾಗ ಸೆಕೆಂಡ್ ಕ್ರಾಸಿನಲ್ಲಿ ಕಾಣುತ್ತಿದ್ದ ಹುಡುಗ ಅವಳಿಗೆ ಇಷ್ಟವಾಗಿದ್ದ. ಹೈಟು ಚೆನ್ನಾಗಿತ್ತು. ಅವನ ಹೇರ್ ಸ್ಟೈಲು ಮಸ್ತ್ ಇತ್ತು. ಹಣೆಯಿಂದ ಕೆಳಗಿಳಿದ ಕೂದಲ ಸೀಳಿನಿಂದ ಕಾಣುವ ಅವನ ಹೊಳಪು ಕಣ್ಣುಗಳು ಅವಳಿಗೆ ಪಸಂದ್ ಆಗಿದ್ದವು. ಆ ದಿನ ಅಕಸ್ಮಾತ್ತಾಗಿ ಆತ ಗ್ರೀನ್ ಸ್ಟ್ರೀಟ್‌ನಲ್ಲಿ ಕಂಡಿದ್ದ. ಸೈಕಲ್ ಮೇಲೆ ಇವಳನ್ನು ದಾಟಿ ಹೋಗಿದ್ದ. ಸ್ವಲ್ಪ ಸ್ಮೈಲ್ ಕೂಡ ಮಾಡಿದಂತೆ ಅನಿಸಿತ್ತು. ಅದು ಆಕಸ್ಮಿಕವೇ ಅಥವಾ ತನ್ನನ್ನು ಫಾಲೋ ಮಾಡಿ ಬಂದಿರಬಹುದೇ ಎಂಬ ಸಂಶಯವೊಂದು ಅವಳ ಮೈಯಲ್ಲಿ ಸಣ್ಣ ಮಿಂಚು ಹೊಡೆದಂತಾಯಿತು. ಈ ಅಪರಿಚಿತ ಊರಲ್ಲಿ ತನ್ನ ಅಸ್ತಿತ್ವದ ಬೀಜವೊಂದು ಮೊಳೆಕೆಯೊಡೆದ ಭಾವವು ಅರಿವಿಲ್ಲದೇ ಅವಳನ್ನು ಗೆಲುವಾಗಿಸಿತ್ತು.

ಆ ದಿನ ತಡರಾತ್ರಿ ವಾಟ್ಸಾಪ್‌ನಲ್ಲಿ ಸೈಕಲ್ ಸ್ಟಿಕ್ಕರ್ ಅಂಟಿಸಿ 'ಯಾಕೋ ನಿದ್ದೆ ಬರ್ತಿಲ್ಲ, ಎದೆಯಲ್ಲಿ ಬರೀ ಟ್ರಿಣ್ ಟ್ರಿಣ್ ಅಂತ್ಯೆತಿ, ಲವ್ವೂ ಶೈಲತ್ತೆ' ಎಂದು ಬರೆದಳು. 'ಲೇ ಕೋತಿ ನಂಗ್ಯಾಕ್ ಲವ್ವೂ ಪವ್ವೂ ಅಂತ ಬರೀತಿ. ಅಥವಾ… ಯಾರೋ ಕರಾವಳಿ ಹುಡುಗನಿಗೆ ಹೇಳೋಕ್ಕೆ ಪ್ರಾಕ್ಟೀಸ್ ಮಾಡಿಕೊಳ್ಳಾಕ ಹತ್ತಿಯೇನ…' ಎಂದು ಶೈಲತ್ತೆ ಕಾಲೆಳೆದಳು. 'ನಂಗೇನೂ ಪ್ರಾಕ್ಟೀಸು ಗ್ರಿಕ್ಟೀಸು ಬೇಕಾಗಿಲ್ಲ ಶೈಲತ್ತೆ… ಲವ್ ಆದ್ರೆ ಡೈರೆಕ್ಟಾಗಿ ಲವ್ವೂ ಅಂತ ಹೇಳೇಬಿಡ್ತೀನಿ… ಹಂಗೇ ಆ ಪ್ರೀತೀನ ಜೀವ ಕೊಟ್ಟು ಹಾಸಿಲ್ ಮಾಡ್ಕೊಳ್ಳುವಾಕಿ ನಾ… ನಿನ್ನ ಥರ ಜೀವನಪೂರ್ತಿ ತ್ಯಾಗಮಯಿಯಾಗಿ, ಪ್ರೇಮವನ್ನು ಆರಾಧಿಸುತ್ತಾ ಆಯುಸ್ಸು ಕಳ್ಕೊಳ್ಳಲ್ಲ, ಗೊತ್ತಾತೇನ?' ಎಂದಳು. ಸೆಂಡ್ ಮಾಡಿದ ಮೇಲೆ ಹಾಗೆ ಕಟುವಾಗಿ ಬರೆದು ಪಾಪ ಶೈಲತ್ತೆ ಮನಸ್ಸಿಗೆ ನೋವು ಮಾಡಿದೆ ಅಂತ ಪರಿತಪಿಸಿದಳು.

ಎಲ್ಲಾ ಸರಿಯಾಗಿದ್ದರೆ ಶೈಲತ್ತೆ ತಾನು ಪ್ರೀತಿಸಿದವನನ್ನು ಮದುವೆಯಾಗಿ ಸಂತೋಷದ ಜೀವನ ನಡೆಸಬೇಕಾಗಿತ್ತು. ಅಫ್ಜಲ್‌ಪುರದಲ್ಲಿ ಟೀಚರ್ ಆಗಿರುವಾಗ ಹುಸೇನ್ ಎನ್ನುವ ಇನ್ನೊಬ್ಬ ಟೀಚರ್ ಜೊತೆ ಪ್ರೇಮವಾಗಿ ಮನೆಯಲ್ಲಿ ರಗಡ್ ರಂಪಾಟವಾಗಿತ್ತು. 'ಶಾದಿ ಮಾಡಕೊಂಡ್ರ ಹುಸೇನಗೇ, ಇಲ್ಲಾಕಿದ್ರ ಈ ಜನ್ಮದಲ್ಲಿ ಮದುವೆ ಬ್ಯಾಡಾ' ಎಂದು ಹಟಕ್ಕೆ ಬಿದ್ದಿದ್ದಳು. 'ನೀ ಮದ್ವಿ ಆಗಿಲ್ಲಾದ್ರೂ ಚಿಂತಿಲ್ಲ, ಆ ಸಾಬಿನ್ನ ಕಟ್ಕೊಳ್ಳೋಕ್ ನಾವ್ ಬಿಡಾಂಗಿಲ್ಲ, ನೀ ಏನಾರ ಅವ್ನ ಜೊತಿ ಹೋದಿ ಅಂದ್ರ, ಎಲ್ಲಿದ್ರೂ ಹುಡುಕಿ ಇಬ್ಬರದೂ ರುಂಡ ತೆಗಿತೀವಿ, ಹುಶಾರ್…' ಎಂದು ಲಿಂಗನಗೌಡ ಪಾಟೀಲರ ಇಡೀ ಕುಟುಂಬ ಧಮಕಿ ಹಾಕಿತ್ತು. ಆಳುಕಾಳುಗಳ ಕೈಗಳಲ್ಲಿ ಕತ್ತಿ ಮಚ್ಚುಗಳು ಹರಿತಗೊಂಡಿದ್ದವು. ಮಾಳಿಗೆ ಮೇಲಿದ್ದ ಬಂದೂಕು ಕೆಳಗಿಳಿದು, ಬೆಂಕಿಯುಗುಳಲು ಸಜ್ಜಾಗಿ ಹಜಾರದ ಗಿಳಿಗೆ ತೂಗುತ್ತಿತ್ತು.

ಆದರೆ ಅಂಥದ್ದೇನು ಸಂಭವಿಸಲೇ ಇಲ್ಲ. ಹುಸೇನ್ ಕಾದು ಬೇರೆಯವಳೊಂದಿಗೆ ನಿಖಾ ಮಾಡಕಂಡ ಖಬರ್ ಬಂತು. ಮನೆ ಗಂಡಸರ ನರಗಳು ಸಡಿಲುಗೊಂಡವು. ಮನೆ ಹೆಂಗಸರ ನಿಟ್ಟುಸಿರು ಹೊರಬಿತ್ತು. ನಿಧಾನ ಶೈಲು ಸರಿ ಹೋಗ್ತಾಳೆ, ಶಾದಿಗೆ ಹೂಂ ಅಂತಾಳೆ ಎಂದು ಎಲ್ಲರೂ ಖುಷಿಯಾಗಿದ್ರು. ನಾಲ್ಕಾರು ಕಡೆಯಿಂದ ನೆಂಟಸ್ತಿಕೆ ಕೂಡ ತಂದರು. ಶೈಲತ್ತೆ ಮದುವೆಗೆ ಒಲ್ಲೆ ಅಂದಳು. ನಾಳೆ ಹೂಂ ಅಂದಾಳು, ಮುಂದೆ ಹಾಂ ಅಂದಾಳು ಎಂದು ಕಾದರು. ಅವರ ನಿರೀಕ್ಷೆ ಸುಳ್ಳಾಯಿತು. ಶೈಲತ್ತೆ ಅವಿವಾಹಿತೆಯಾಗಿಯೇ ಉಳಿದಿದ್ದಳು!

ಆದರೆ ಶೈಲತ್ತೆಯೆಂದೂ ಕಹಿ ಭಾವನೆಯನ್ನು ಇಟ್ಟುಕೊಂಡು ಕೊರಗುತ್ತಿರಲಿಲ್ಲ. ಗಂಭೀರ ಅಪ್ಪ, ಮೌನಿ ಅವ್ವಳಿಂದಾಗಿ ಮನೆ ಯಾವಾಗಲೂ ಬಿಗಿ ವಾತಾವರಣದಲ್ಲೇ ಇರುತ್ತಿತ್ತು. ಆದರೆ ಶೈಲತ್ತೆ ಬಂದಳೆಂದರೆ ಏನೇನೋ ಹೇಳಿ ನಗೋಳು. ಚಿಕ್ಕ ಚಿಕ್ಕ ವಿಷಯಗಳಲ್ಲಿ ಜೀವ ತುಂಬೋಳು. ಮಕ್ಕಳನ್ನು ಕಟ್ಟಿಕೊಂಡು ಆಟ ಆಡೋಳು. ನೂರಾರು ಪುಸ್ತಕಗಳನ್ನು ಓದುತ್ತಿದ್ದ ಶೈಲತ್ತೆ ಮಕ್ಕಳಿಗೆ ಆಯ್ದು ಪ್ರೇಮ ಕತೆಗಳನ್ನು, ಅದರಲ್ಲೂ ಸುಖಾಂತದ ಕತೆಗಳನ್ನು ಹೇಳುತ್ತಿದ್ದಳು. ಕೆಲವೊಮ್ಮೆ 'ಯೇ ಚಂದ ಲವ್ ಸ್ಟೋರಿ ಇದೆಯಂತೆ, ನಡೀರೇ' ಅಂತ ಎಲ್ಲರನ್ನೂ ಮ್ಯಾಟನಿ ಸಿನಿಮಾಕ್ಕೆ ಕರೆದೊಯ್ಯೋಳು. ಅಜ್ಜಿ ಅಪ್ಪ ಚಿಕ್ಕಪ್ಪಂದಿರು ಅನ್ನುವಷ್ಟು ಅಂದರು. ಪ್ರಾರಂಭದಲ್ಲಿ 'ಮದ್ವೆ ವಯಸ್ಸು ಮುಗೀತು, ಇನ್ನೂ ಮಕ್ಕಳಾಟ ಬಿಡಾಕಿಲ್ಲ ನೀ' ಎಂದು ಹಂಗಿಸುತ್ತಿದ್ದರೂ ಆ ಮಾತು ಅವರ ಒಡಲನ್ನೇ ಇರಿಯುತ್ತಿದ್ದರಿಂದ ಕ್ರಮೇಣ ಸುಮ್ಮನಾದರು. ಕೈಗೂಡದ ಪ್ರೇಮದಿಂದ ಆಕಿ ಹತಾಶೆಗೊಂಡು ಕೊರಗುತ್ತಿದ್ದರೆ ಅದನ್ನು ಲಿಂಗನಗೌಡನ ಮನೆಯವರು ಅರ್ಥಮಾಡಿಕೊಳ್ಳುತ್ತಿದ್ದರು. ಆದರೆ ಬೇರೆಯವರೊಂದಿಗೆ ಮದುವೆಯನ್ನು ನಿರಾಕರಿಸುವ ಮೂಲಕ ಮತ್ತು ತರುವಾಯದಲ್ಲಿ ವ್ಯಕ್ತಿತ್ವದಲ್ಲಿ ತಂದುಕೊಂಡ ಬದಲಾವಣೆಗಳ ಮೂಲಕ ಮನೆಯವರಿಗೆ ಶೈಲತ್ತೆ ಹೆಚ್ಚೆಚ್ಚು ನಿಗೂಢವಾದಳು. ನಿಖರವಾಗಿ ಶೈಲತ್ತೆಯ ಪ್ರೇಮ ಕಹಾನಿ ಬಗ್ಗೆ ಎಂದೂ ಯಾರದೇ ಬಾಯಿಂದ ಪೂರ್ತಿಯಾಗಿ ಕೇಳದಿದ್ದರೂ, ಮನೆಯಲ್ಲಿ ಆಕೆಯ ಬಗ್ಗೆ ಆಗಾಗ ಆಡುತ್ತಿದ್ದ ಮೂದಲಿಕೆಯ, ವ್ಯಂಗ್ಯದ ಮಾತುಗಳಿಂದಲೇ ಚಿಕ್ಕವಳಿರುವಾಗ ಅದೆಲ್ಲ ಸುಮಿಯ ತಿಳಿವಳಿಕೆಗೆ ಬರಲು ಸಾಕಾಗಿತ್ತು.